ದೇವಿಯು ಕೊಲೆಗೆ ಕಾರಣರಾದವರನ್ನು ಬಯಲಿಗೆಳೆಯಬೇಕು. ಇದು ವರದಕ್ಷಿಣೆ ಪ್ರಕರಣದಿಂದ ಆದ ಸಾವು. ಪೋಲೀಸ್ ಅಧಿಕಾರಿಗಳಿಂದ ಯಾವುದೇ ವಿಚಾರಣೆ ನಡೆದದ್ದು ಈವರೆಗೆ ಕಂಡು ಬಂದಿಲ್ಲ. ಕಾರಣ ತಡವಾದರೂ ಚಿಂತೆಯಿಲ್ಲ ಈಗಲಾದರೂ ಮಹಾದೇವಿಯ ಸಂದೇಹಾಸ್ಪದ ಸಾವಿನ ಕುರಿತು ಸಿ.ಬಿ.ಐ. ತನಿಖೆ ನಡೆಸಿ ತಪ್ಪಿತಸ್ಥರನ್ನು ಬಂಧಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕು ಚಿಕ್ಕ ಜಂಬಗಿಯ ಶ್ರೀಮತಿ ಮಹಾದೇವಿ ೧೯ ವರ್ಷದ ಯುವತಿಯ ಮರಣದ ಬಗ್ಗೆ ಸ್ಥಳೀಯ ಸಾವಲಗಿ ಪೋಲೀಸರು ''ವರದಕ್ಷಿಣೆ ಸಾವಿನ'' ಪ್ರಕರಣವನ್ನು ದಾಖಲು ಮಾಡಿಕೊಂಡು ತಪಾಸಣೆ ನಡೆಸಿ ಆರೋಪಿಗಳ ಮೇಲೆ ದೋಷಾರೋಪಣೆಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಸದಸ್ಯರು ಸೂಚಿಸಿರುವಂತೆ ಈ ಪ್ರಕರಣದಲ್ಲಿ ಯಾವ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿಲ್ಲ. ಯಾವ ತನಿಖೆಯು ನಡೆದಿಲ್ಲವೆಂದು ಹೇಳಿರುವ ಮಾತಿನಲ್ಲಿ ಯಾವ ಸತ್ಯಾಂಶವೂ ಇಲ್ಲ.

ಪ್ರಕರಣದ ವಿವರಗಳು ಕೆಳಕಂಡಂತಿವೆ.

೯-೧೦-೧೯೮೭ ರಂದು ಶಿವಪ್ಪ ಪಂಡಿತ್ ಮಲಕಣ್ಣವರ್ ಎಂಬುವವರು ಸಾವಳಗಿ ಪೋಲೀಸ್ ಠಾಣೆಯಲ್ಲಿ ಹಾಜರಾಗಿ ತಮ್ಮ ಪತ್ನಿ ಶ್ರೀಮತಿ ಮಹಾದೇವಿಯು ೮-೧೦-೧೯೮೭ ರಂದು ಜಲಬಾದೆಗೆಂದು ಮನೆಯಿಂದ ಹೊರಗೆ ಹೋದವರು ಮನೆಗೆ ಬಾರದೆ ಕಾಣೆಯಾಗಿದ್ದಾಳೆಂದು ಅರ್ಜಿಯನ್ನು ಕೊಟ್ಟರು. ಈ ಅರ್ಜಿಯ ಮೇಲೆ ಸಾವಳಗಿ ಪೋಲೀಸ್ ಠಾಣೆಯಲ್ಲಿ 'ಸ್ತ್ರೀ ಕಣ್ಮರೆಯಾದ ಪ್ರಕರಣ' ವನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಪ್ರಾರಂಭಿಸಲಾಯಿತು. ಅಷ್ಟರಲ್ಲೇ ಶ್ರೀಮತಿ ಮಹಾದೇವಿಯವರ ತಂದೆ ಗೌಡಪ್ಪ ಶಿವನಗೌಡ ಪಾಟೀಲ್ ರವರೂ ಸಹ ಅದೇ ಠಾಣೆಗೆ ಹೋಗಿ ತಮ್ಮ ವ ಗಳಿಗೆ ವರದಕ್ಷಿಣೆಗಾಗಿ ಅವಳ ಗಂಡ ಕಿರುಕುಳ ಕೊಡುತ್ತಿದ್ದುದರಿಂದ ಅವರ ಮಗಳು ಮಹಾದೇವಿ ಕಾಣೆಯಾಗಿದ್ದಾಳೆಂದು ದೂರನ್ನು ಕೊಟ್ಟರು. ಸದರೀ ದೂರಿನ ಮೇಲೆ ಭಾ. ದಂ. ಸಂ. ೪೯೮ ಎ ಪ್ರಕಾರ ಅಪರಾಧ ಕ್ರಮ ಸಂಖ್ಯೆ. ೭೨/೮೭ ಇದನ್ನು ದಾಖಲು ಮಾಡಿಕೊಂಡು ತಪಾಸಣೆಗೆ ತೆಗೆದುಕೊಳ್ಳಲಾಯಿತು.

ತಾರೀಖು ೧೦-೧೦-೧೯೮೭ ರಂದು ಶ್ರೀಮತಿ ಮಹಾದೇವಿಯವರ ಮೃತ ದೇಹವು ಚಿಕ್ಕ ಜಂಬಗಿಯ ಸರಹದ್ದಿನಲ್ಲಿ ಕೃಷ್ಣ ನದಿಯ ನೀರಿನಲ್ಲಿ ಕಾಣುತ್ತಿರುವುದಾಗಿ ತಿಳಿದು ಬಂದ ಮೇರೆಗೆ ಅಸ್ವಾಭಾವಿಕ ಮರಣದ ಪ್ರಕರಣವನ್ನು ದಾಖಲು ಮಾಡಿಕೊಂಡು ಶವದ ಮೇಲೆ ಮಹಜರ್ ಮತ್ತು ಇತರ ತಪಾಸಣೆಯನ್ನು ನಡೆಸಲಾಯಿತು. ಶವದ ಮಹಜರ್ ಇತ್ಯಾದಿಗಳನ್ನು ಮೃತ ಯುವತಿಯ ಪೋಷಕರ ಸಮ್ಮುಖದಲ್ಲಿ ನಡೆಸಿ ಮರಣೋತ್ತರ ವೈದ್ಯಕೀಯ ಪರೀಕ್ಷೆಯನ್ನೂ ನಡೆಸಲಾಯಿತು. ವೈದ್ಯರು ಶ್ರೀಮತಿ ಮಹಾದೇವಿಯವರ ಮರಣ ನೀರಿನಲ್ಲಿ ಮುಳಗಿ ಉಸಿರು ಕಟ್ಟಿದ್ದರಿಂದ ಆಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ತಪಾಸಣೆಯನ್ನು ನಡೆಸಿದ ಜಮಖಂಡಿ ಡಿ ಎಸ್.ಪಿ. ರವರು ವರದಕ್ಷಿಣೆಗಾಗಿ ಕೊಟ್ಟ ಕಿರುಕುಳದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ ಇದೊಂದು ವರದಕ್ಷಿಣೆಯ ಪಿಡುಗಿನ ಮರಣವೆಂದು ಪರಿಗಣಿಸಿ ಶ್ರೀಮತಿ ಮಹಾದೇವಿಯರ ಗಂಡ ಶಿವಪ್ಪ ಪಂಡಿತ್ ಮಲಕಣ್ಣ ಮತ್ತು ಅವರ ಸಹೋದರನನ್ನು ದಸ್ತಗಿರಿ ಮಾಡಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಮೊಕದ್ದಮೆ ನ್ಯಾಯಾಲಯದ ವಿಚಾರಣೆಯಲ್ಲಿದೆ.

ಅಧ್ಯಕ್ಷರು.—ಶ್ರೀ ವಸಂತ ಬಂಗೇರಾ, ಆಬ್ಸೆಂಟ್.

## 2) ಮಂಗಳೂರಿನ ಹಳೆಯ ಬಂದರಿನ ಬಳಿ ಇರುವ ಬೆಂಗರೆ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡದಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್.- ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಹಳೆ ಬಂದರಿನ ಬಳಿ ಇರುವ ಬೆಂಗರೆ ಎಲ್ಲಾ ಅಭಿವೃದ್ಧಿ ಕ್ರಮಗಳಿಂದ ವಂಚಿತವಾದ ಪರ್ಯಾಯ ದ್ವೀಪ. ಅಲ್ಲಿನ ನಿವಾಸಿಗಳು ಬಹುತೇಕ ಮೀನುಗಾರರು. ತಲೆಮಾರುಗಳಿಂದ ಈ ಕಸುಬನ್ನು ಆಶ್ರಯಿಸಿದವರು ಅವರು ಕಸಬಿಗೆ ಬೇಕಾದ ಸ್ಥಳವನ್ನು ಹಳೇ ಬಂದರು ವಠಾರದಲ್ಲಿ ಪೋರ್ಟ್ ಇಲಾಖೆಯವರು

ನೀಡಿದ್ದರು. ಮತ್ತು ಅದಕ್ಕೆ ಇಲಾಖೆ ವಿಧಿಸಿದ ಹಣವನ್ನೂ ನ್ಯಾಯಾ ಸಮ್ಮತವಾಗಿ ಪಾವತಿಸುತ್ತಿದ್ದರು. ಇತ್ತೀಚೆಗೆ ರಾಜ್ಯಪತ್ರದಲ್ಲಿ ಪ್ರಕಟವಾದ ಸರಕಾರಿ ಆಜ್ಞೆಯಿಂದ ಈ ಹಿಂದೆ ೧೦೦ ತೆರುತ್ತಿದ್ದವರು ಈಗ ೧೮೦೦ ಸುರಿಯಬೇಕು. ಆದರಲ್ಲೂ ವಾಸದ ಜಾಗಕ್ಕೆ ಹೆಚ್ಚು ದರ ವಿಧಿಸಿದ್ದಾರೆ. ವಿಮಾನುಗಾರಿಕೆಯಂ ಕಸಬಿಗಾಗಿ ಉಪಯೋಗಿಸುವ ಕಸಬಿನ ಜಾಗಕ್ಕೆ ಹತ್ತು ಪಟ್ಟು, ಹೆಚ್ಚು ದರವನ್ನು ವಿಧಿಸಿದ್ದಾರೆ. ಇದನ್ನು ತೆರೆದಿದ್ದಲ್ಲಿ ಯಾವುದೇ ಪರಿಹಾರವಿಲ್ಲದೆ ಕಟ್ಟಡವನ್ನು ಪೋರ್ಟ್ ಇಲಾಖೆಗೆ ನೀಡಬೇಕು. ಅಥವಾ ತಮ್ಮ ಖರ್ಚಿನಿಂದ ಕಟ್ಟಡ ತೆರವು ಮಾಡಬೇಕು ಎಂಬ ಒತ್ತಾಯ ಬಂದಿದೆ. ಇದರಿಂದಾಗಿ ವಿಮಾನುಗಾರರು ನಿರ್ಗತಿಕರಾಗಬೇಕಾದ ದುರ್ಭರ ಪ್ರಸಂಗ ಒದಗಿ ಬಂದಿದೆ. ಶತಮಾನಗಳಿಂದಲೂ ವಿಮಾನುಗಾರರು ಇಂತಹ ಸವಲತ್ತಿನಿಂದ ವಂಚಿತರಾಗಿ ಹತಾಸರಾಗುವಂತಾಗಿದೆ. ಕಡಲ ಒಡಲಲ್ಲಿ ಕಾಯಕ ಮಾಡುತ್ತಿದ್ದ ಬಡ ಜನರ ಒಡಲಿಗೆ ಇದು ಬೆಂಕಿ ಹೆಚ್ಚಿದ ಹಾಗೆ ಆಗಿದೆ. ಬಡವರ ಕಣ್ಣೀರ ಕಡಲಲ್ಲಿ ಕೊಂಡು ಕಣ್ಣು ಕಾಣದಂತೆ ತೊಳಲಾಡುವಂತಾಗಿದೆ. ಅಲ್ಲಿ ನೆಲ ಬಾಡಿಗೆ ಇಳಿಸಿ, ಬೇಕಾದರೆ ಹಿಂದಿನ ದರಕ್ಕಿಂತ ಎರಡು ಪಾಲು ವಿಧಿಸಿ (ಹತ್ತು ಪಟ್ಟು ಅಲ್ಲ) ವಿಮಾನುಗಾರರನ್ನು ಬದಕಲು ಬಿಡಿ ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ದಿನಾಂಕ. ೨೩-೧೧-೧೯೮೨ರ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ ೧೦೦ ಪಿಎಸ್‌ಪಿ ೮೨ರಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಬಂದರುಗಳಲ್ಲಿಯ ಶುಲ್ಕವನ್ನು ಪರಿಷ್ಕರಿಸಲಾಯಿತು. ಈ ನಿಯಮಗಳನ್ನು ಪರಿಷ್ಕರಿಸಿವ ಮುನ್ನ ಗೆಜೆಟ್‌ನಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕರೆಯಲಾಯಿತು. ಆ ಸಂದರ್ಭದಲ್ಲಿ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲ, ಬೆಂಗ್ರೆಯ ಖಾಲಿ ಜಾಗವನ್ನು ಬಂದರು ಮತ್ತು ಔದ್ಯಮಿತ ಚಟುವಟಿಕೆಗಳಿಗಾಗಿ ಉಪಯೋಗಿಸುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೧೦ ಪಿಎಸ್‌ಪಿ ೮೫ ದಿನಾಂಕ ೩೧-೮-೧೯೮೭ರಂತೆ ಒಂದು ಮಾಸ್ಟರ್ ಪ್ಲಾನ್ ತಯಾರಾಗುತ್ತಿದೆ. ಬೆಂಗ್ರೆ ಮತ್ತು ಉಲ್ಲಾಳ ಸೇಂಡ್ಸ್ ಪಿಟ್ ಜಾಗವನ್ನು ಹಿಂದಿನ ಮಂಗಳೂರು ವಿಶ್ವಸ್ಥ ಮಂಡಳಿಯು ಒಂದು ಪ್ರತ್ಯೇಕವಾದ ಘಟಕವಾಗಿ ಪರಿಗಣಿಸಿ ಅತೀ ಕಡಿಮೆ ಬಾಡಿಗೆಯನ್ನು ನಿಗದಿಸಿತ್ತು. ಸಾಮಾನ್ಯವಾಗಿ ಬಂದರು ಪ್ರದೇಶದಲ್ಲಿ ನಿವೇಶನಗಳು, ಮನೆಗಳು ಪ್ರಶಸ್ತ್ಯವಲ್ಲ ಅತೀ ಕಡಿಮೆ ಬಾಡಿಗೆ ನಿಗದಿಸಿರುವುದರ ಫಲವಾಗಿ ಕೆಲವೊಂದು ಮನೆ ಹಿಡುವಳಿಗಳು ೮೦೦ ಚದರ ಮೀಟರ್‌ಗಳಿಗೂ ಮೀರಿದ್ದು ಆದರಲ್ಲಿ ಮನೆ ಅಲ್ಲದೆ ತೆಂಗಿನ ಮರಗಳನ್ನು ನೆಟ್ಟು ಫಲಾನುಭವಿಸಿಕೊಂಡು ಬರುವಂತಾಗಿದೆ. ಈ ಅತೀ ಕಡಿಮೆ ದರವೇ ಕಳೆದ ೫-೬ ವರ್ಷಗಳಲ್ಲಿ ಮಾಸ್ತ್ಯವ್ಯದ ಬಗ್ಗೆ ಅತಿಕ್ರಮಣಗಳು ೩೦೦ಕ್ಕೂ ಹೆಚ್ಚಿರುವುದಕ್ಕೆ ಕಾರಣವಾಗಿದೆ. ಮನೆ ನಿವೇಶನಗಳ ಅನಧಿಕೃತ ಹೆಚ್ಚಳ ತಡೆಗೆ ಹೆಚ್ಚುವರಿ ಬಾಡಿಗೆ ನಿಗದಿಯೂ ಸೂಕ್ತ ಎಂದು ಇದೇ ರೀತಿ ಮಲ್ಪೆ ಬಂದರಿನ ಸ್ಥಿತಿ ಪರಿಶೀಲಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಅತಿಕ್ರಮಣ ಪುನರ್ನಿವೇಶನ ಸಭೆಯಲ್ಲೂ ಅನೌಪಚಾರಿಕವಾಗಿ ಅಭಿಪ್ರಾಯಪಡಲಾಗಿತ್ತು. ಬೆಂಗ್ರೆ ಮತ್ತು ಉಲ್ಲಾಳ ಸೆಂಟ್‌ಪಿಟ್‌ಗಳು ವಿಮಾನು ಒದಗಿಸಲು ಸಂಸ್ಕರಿಸಲು ಹಾಗೂ ವಿಮಾನುಗಾರ ಕುಟುಂಬಗಳ ವಾಸ್ತವ್ಯಕ್ಕೆ ಪ್ರಶಸ್ತವಾಗಿದ್ದು ಇದನ್ನು ಗುರುಪುರ. ನೇತ್ರಾವತಿ ನದಿಗಳ ಪೂರ್ವದ ಕಿನಾರೆ. ಮುಖ್ಯ ಜಾಗದಿಂದ ವಿಮಾನುಗಾರಿಕೆ ಮತ್ತು ವಸತಿ ಉಪಯೋಗದ ಬಾಡಿಗೆ ನಿಗದಿಯ ಸಲುವಾಗಿ ಪ್ರತ್ಯೇಕವಾಗಿ ಪರಿಗಣಿಸುವ ಅಗತ್ಯವಿಲ್ಲ. ದಿನೇ ದಿನೇ ನಿರ್ವಹಣಾ ವೆಚ್ಚವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ೧೨ ವರ್ಷಗಳ (೧೯೭೬-೮೮) ಅಂತರದಲ್ಲಿ ಶುಲ್ಕ ದರ ಪರಿಷ್ಕರಿಸುವುದು ನ್ಯಾಯವೇ ಆಗಿದೆ. ೧೯೮೧-೮೨ರಲ್ಲಿಯ ಇಲಾಖಾ ಯೋಜನೇತರ ವೆಚ್ಚ ೫೮.೨೧ ಲಕ್ಷ ರೂಪಾಯಿಗಳಾಗಿದ್ದು ಇಲಾಖಾ ಉತ್ಪನ್ನ ೩೦.೯೪ ಲಕ್ಷ ರೂಪಾಯಿಗಳು. ೧೯೮೬-೮೭ರಲ್ಲಿ ಇದೇ ವೆಚ್ಚವು ೯೮.೫೧ ಲಕ್ಷ ರೂಪಾಯಿಗಳಾಗಿದ್ದು ಉತ್ಪನ್ನವು ೪೯.೨೪ ಲಕ್ಷ ರೂಪಾಯಿಗಳು. ಈ ನಿಟ್ಟಿನಲ್ಲಿ ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸುವುದು ಇಲಾಖೆಯ ನಿರ್ವಹಣೆಯ ದೃಷ್ಟಿಯಿಂದ ಅತೀ ಅವಶ್ಯ. ಈ ಪರಿಷ್ಕರಣೆಯಿಂದಲೂ ಇಲಾಖೆಯು ಖರ್ಚು ಉತ್ಪನ್ನಗಳನ್ನು ಪರಿದೂಗಿಸಿಕೊಂಡು ಹೋಗುವುದು ಕಷ್ಟಸಾಧ್ಯ. ಆದಾಗ್ಯೂ ಬೆಂಗ್ರೆ ಮೊಗವೀರ ಸಭಾ ಇವರ ಕೋರಿಕೆಯ ಮೇರೆಗೆ ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ. ಆದೂ ಅಲ್ಲದೆ ಮಂಗಳೂರು ಬಂದರಿನ ಮರಳು ದಿಣ್ಣೆಯ ಪ್ರದೇಶದ ಬಂದರು ಭೂಮಿಯ ವಾಸ್ತವದ ಅನುಭೋಗದಾರರ ಒಂದು ನಿಯೋಗವು ಹಿಂದಿನ ದರದಲ್ಲಿ ನೆಲದ ಬಾಡಿಗೆ ವಸೂಲು ಮಾಡುವಂತೆ ಮನವಿ ಸಲ್ಲಿಸಿರುವುದರಿಂದ ಈ ವಿಷಯವನ್ನು ಪರಿಶೀಲಿಸಿ ತೀರ್ಮಾನವನ್ನು ತೆಗೆದುಕೊಳ್ಳುವವರೆಗೆ ವಾಸ್ತವ್ಯದ ಅನುಭೋಗಗಳಿಗೆ ಸಂಬಂಧಿಸಿದಂತೆ ಹಿಂದಿನ ದರಲ್ಲಿ ಬಾಡಿಗೆ ಪಾವತಿ ಬಂದಲ್ಲಿ ಬಾಕಿ ವಸೂಲಿ ಅಧಿಕಾರಕ್ಕೆ ಚ್ಯುತಿ ಇಲ್ಲದಂತೆ ಅಂಶಿಕ ಪಾವತಿಯಾಗಿ ಸ್ವೀಕರಿಸಲಾಗುತ್ತಿದೆ. ಮನೆ ಕಟ್ಟಿಕೊಂಡಿರುವವರಿಗೆ ಮೊದಲು ಇರುವಂತೆಯೇ

ದರವನ್ನು ನಿಗಧಿ ಮಾಡಿದ್ದೇವೆ. ವ್ಯಾಪಾರಿಗಳಿಗೆ ಮಾತ್ರ ಜಾಸ್ತಿ ಮಾಡಿದ್ದೇವೆ. ಇದನ್ನೂ ಸಹ ಪರಿಶೀಲನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

## 3) ಮಂಗಳೂರಿನಿಂದ ಹೊರಡುವ ಬಸ್ಸುಗಳು ಹಂಪನಕಟ್ಟೆಯಂ ಮೂಲಕ ಹೋಗಲು ಮನವಿ

ಶ್ರೀ ಬಿ.ಎಂ. ಇದಿನಬ್ಬ–ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಬಿಜೈಯಲ್ಲಿ ಕೆ.ಎಸ್ ಆರ್.ಟಿ.ಸಿ ಡಿಪೋ ಬಸ್ ನಿಲ್ದಾಣವಿದೆ, ಇಲ್ಲಿಂದ ಹೊರಡುವ ಎಲ್ಲಾ ಬಸ್ಸುಗಳು ಜ್ಯೋತಿ ಸರ್ಕಲ್‌ಗಾಗಿ ಬೆಂಗಳೂರು, ಮೈಸೂರು, ಇನ್ನಿತರ ಕಡೆಗೆ ಹೋಗುತ್ತವೆ, ಬರುತ್ತವೆ. ಆದರೆ ಮಂಗಳೂರಿನ ಜನನಿಬಿಡ ವಾಣಿಜ್ಯಂಶ್ಥಿರುವ ಹಂಪನಕಟ್ಟೆಗಾಗಿ ಈ ಬಸ್ಸುಗಳು ಹೋಗುವುದು, ಬರುವುದು ತುಂಬಾ ಅತಗತ್ಯವಾಗಿರುತ್ತದೆ. ಈ ರೀತಿ ಹಂಪನಕಟ್ಟೆಗಾಗಿ, ಜ್ಯೋತಿ ಸರ್ಕಲಿಗಾಗಿ ಹೋಗಿ, ಬಂದರೆ ಹೆಚ್ಚು ಪ್ರಯಾಣಿಕರೂ ಸಿಕ್ಕುತ್ತಾರೆ, ಸರಕಾರಕ್ಕೂ ಲಾಭವಾಗುತ್ತದೆ. ಸಾವಿರಾರು ಪ್ರಯಾಣಿಕರಿಗೂ ತುಂಬಾ ಅನುಕೂಲವಾಗುತ್ತದೆ, ಹಂಪನಕಟ್ಟೆಗಾಗಿ ಹೋಗುವುದರಿಂದ. ಮತ್ತು ಬರುವುದರಿಂದ ಐದು ನಿಮಿಷ ಕೂಡ ಹೆಚ್ಚು ವ್ಯಯವಾಗುವುದಿಲ್ಲ. ಸರ್ವ ಪ್ರಯಾಣಿಕರ ಕೇಳಿಕೆ ಇದಾಗಿದೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಾರಿಗೆ ಸಚಿವರಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

## ತರಕಾರಿ ಬೆಳೆಕಾರರಿಗೆ ಶೀತಲ ಗೃಹ ಮತ್ತಿತರ ಸೌಕರ್ಯಗಳನ್ನು ಒದಗಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಮುಖ್ಯ ಸಹಕಾರ ಸಂಘಗಳಲ್ಲಿ ಒಂದಾದ, ಹಣ್ಣು ಮತ್ತು ತರಕಾರಿ ಮಾರಾಟಗಾರರ ಸೊಸೈಟಿಯು ಮುಖ್ಯ ಕಚೇರಿ ಲಾಲ್‌ಬಾಗ್‌ನಲ್ಲಿದೆ. ಅಲ್ಲಿಗೆ ತರಕಾರಿ ಬೆಳೆಗಾರರಾದ ರೈತರು ಬಂದರೆ ಯಾವೊಂದು ಅನುಕೂಲಗಳಿಲ್ಲದೆ, ತಂಗಲು ಒಂದು ಮೇಲ್ಛಾವಣಿ ಇರುವ ಒಂದು ಜಾಗವಾಗಲಿ, ಕುಡಿಯುವ ನೀರು, ಶೌಚಗೃಹ, ಇತಾದಿಗಳು ಇಲ್ಲದೆ, ಅಲ್ಲಿಗೆ ಬರುವ ರೈತ ಬೆಳೆಗಾರರಿಗೆ ತುಂಬಾ ತೊಂದರೆಯಿದೆ. ಇದಂ ಸರಿಪಡಿಸ ಬೇಕು.

ಸ್ವಲ್ಪ ದೂರದೃಷ್ಟಿಯಿಂದ ದೂರದ ಮಾರ್ಕೆಟ್ ರೇಟ್‌ಗಳನ್ನು ಗಮನಿಸಿ, ರೈತರ ಬೆಳೆಗಳಾದ ಟೊಮೋಟೋ, ಬೀನ್ಸ್, ಆಲೂಗಡ್ಡೆ, ಇತರ ತರಕಾರಿಗಳನ್ನು ಕರ್ನಾಟಕದಿಂದ ಬೇರೆ ರಾಜ್ಯಗಳು, ಮುಖ್ಯವಾಗಿ, ಬಾಂಬೆ, ಕಲ್ಕತ್ತಾ, ಡೆಲ್ಲಿ, ಅಲಹಾಬಾದ್ ಇತರ ಕಡೆಗಳಿಗೆ ಲಾಭದಾಯಕವಾದ ಬೆಲೆ ಇದ್ದರೆ, ರಫ್ತು ಮಾಡುವ ವ್ಯವಸ್ಥೆ ಇರಬೇಕು. ಲಾಭದ ಒಂದೇ ದೃಷ್ಟಿಯಿಂದ ಕೆಲಸ ಮಾಡಬೇಕು. ಈ ಬಗ್ಗೆ ತಕ್ಕ ವ್ಯವಸ್ಥೆಯ ಏರ್ಪಾಡು ಅವಶ್ಯವಿದ್ದರೂ ಇನ್ನೂ ಆಗಿಲ್ಲ. ರೈತರ, ಬೆಳೆಗಾರರ ಹಿತರಕ್ಷಣೆ ಮುಂದಿರುವಂತಾಗ ಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ತಕ್ಕ ಕ್ರಮ ಕೈಗೊಳ್ಳಬೇಕು.

ಶೀತಲ ಗೃಹಗಳನ್ನು ಹೆಚ್ಚಿಗೆ ಸ್ಥಾಪಿಸ ಬೇಕು. ಕೋಲಾರದ ಶೀತಲಗೃಹ ತಕ್ಷಣ ಪ್ರಾರಂಭಿಸ ಬೇಕು (ಸಮಾರು ೧೫ ವರ್ಷದಿಂದ ಕಟ್ಟಿದ ಅರಮನೆಯಾಗಿದೆ) ರೈತರ ಬೆಳೆಯನ್ನು ಸೊಸೈಟಿಗಳು ರೈತರು ತರಕಾರಿ ಹಣ್ಣುಗಳನ್ನು ಬೆಲೆ ಕುಸಿಸಿದ್ದಾರೆ. ಶೀತಲ ಗೃಹದಲ್ಲಿ ಸ್ಪೋರ್ ಮಾಡಲು ಅನುಕೂಲವಿರುವಂತೆ ಕ್ರಮ ಕೈಗೊಳ್ಳಬೇಕೆಂದು ಕೇಳಿ ಮಾನ್ಯ ತೋಟಗಾರಿಕೆ ಮಂತ್ರಿಗಳು ಈ ಬಗ್ಗೆ ಹೇಳಿಕೆ ನೀಡಿ ರೈತರ ರಕ್ಷಣೆಗೆ ಬರುವಂತೆ ಆಶಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ, ಮೂರು ದಿವಸಗಳ ಹಿಂದೆ ಈ ಸಂಘದ ಚಟುವಟಿಕೆಗಳ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದ್ದಾರೆ ಸಮಗ್ರವಾಗಿ ಅವಕ್ಕೆ ಉತ್ತರವನ್ನು ಕೊಟ್ಟಿರುತ್ತೇನೆ. ಆದರೂ ಕೂಡ ಇನ್ನೊಮ್ಮೆ ನನ್ನ ಹೇಳಿಕೆಯನ್ನು ಈ ಕುರಿತು ಕೊಡುವುದಕ್ಕೆ ಇಷ್ಟಪಡುತ್ತೇನೆ.